1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**.396/2023**

ಹೆಸರುಃ ಗಣೇಶ ನಾಯ್ಕ ಚಾಸಾಃ 4

ತಂದೆಃ ರಾಮನಾಯ್ಕ ಪ್ರಾಸಾ: 4

ವಯಸ್ಸುಃ 45 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಗುಳ್ಳೇಹಳ್ಳಿ ಗ್ರಾಮ , ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 04-03-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಸಾಕ್ಷಿಯು ಆರೋಪಿ ತೋರಿಸಿದ ಸ್ಥಳದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ನಿಶಾನೆ.ಪಿ.4 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.4 (ಎ) ಎಂದು ಗುರುತಿಸಲಾಯಿತು. ದಿನಾಂಕಃ 20-07-2021 ರಂದು ಬನ್ನಿಹಟ್ಟಿ ಹತ್ತಿರ ಮೊಬೈಲ್ ಕಳ್ಳತನದ ವಿಚಾರವಾಗಿ ಸಹಿ ಮಾಡಿರುತ್ತೇನೆ . ಸದರಿ ಸಮಯದಲ್ಲಿ ಚಾಸಾ 5 ಮತ್ತು ಆರೋಪಿ ನನ್ನ ಜೊತೆ ಸಹಿ ಮಾಡಿರುತ್ತಾರೆ. 9-30 ರಿಂದ 10-00 ಗಂಟೆಯ ಒಳಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಆರೋಪಿ ಹಾಜರಿದ್ದು ಸ್ಥಳ ತೋರಿಸಿರುತ್ತಾರೆ.

ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ . ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ . ಸದರಿ ಭಾವಚಿತ್ರವನ್ನು ನಿಪಿ.5 ಎಂದು ಗುರುತಿಸಲಾಯಿತು .

ಆರೋಪಿಯ ಹೆಸರು ಮರೆತುಹೋಗಿರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**sd/-**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**